# ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕೆರೆಕೋಡಿಹಟ್ಟಿ ಹಿರಿಯೂರು ತಾ||.

ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕೆರೆಕೋಡಿಹಟ್ಟಿ ಹಿರಿಯೂರು ತಾ||. ಈ ಶಾಲೆಯು **2004-2005** ರಲ್ಲಿ ಪ್ರಾರಂಭ ವಾಗಿದ್ದು ಈಶಾಲೆಯ ಒಟ್ಟು ವಿಸ್ತೀರ್ಣ ಸುಮಾರು **2** ಎಕರೆ ಇದ್ದು ಗ್ರಾಮ ಪಂಚಾಯತಿಯ ಅಧೀನದಲ್ಲಿಯಿದ್ದು ರಾಜ್ಯಪಾಲರ ಹೆಸರಿನಲ್ಲಿದೆ

ಈ ಶಾಲೆಯು ಪ್ರಸ್ತುತ **1** ರಿಂದ **5** ತರಗತಿಯ ವರೆಗೆ ನಡೆಯುತ್ತಿದ್ದು ಇದೊಂದು ಕುಗ್ರಾಮವಾಗಿದ್ದು ಇಲ್ಲಿಯ ಎಸ್.ಡಿ.ಎಮ್.ಸಿ. ಅಧ್ಯಕ್ಷರು ಮತ್ತು ಸದಸ್ಯರ ಸಹಕಾರದಿಂದ ಶಾಲೆಯ ಎಲ್ಲಾ ಮಕ್ಕಳ ಕಲಿಕೆಯು ಉತ್ತಮವಾಗಿದೆ ಇಲ್ಲಿನ ಮಕ್ಕಳ ಕಲಿಕೆಯು ಇಲಾಖೆಯ ಪ್ರಶಂಸೆಗೆ ಒಳಗಾಗಿದ್ದು ಎಲ್ಲರ ಮೆಚ್ಚುಗೆಯನ್ನು ಗಳಿಸಿದೆ.

ಪ್ರಸ್ತುತ ಸಾಲಿನಲ್ಲಿ ಮಕ್ಕಳ ದಾಖಲಾತಿ ಇಂತಿದೆ

| 1 ತರಗತಿ | 2ನೇ ತರಗತಿ | 3ನೇ ತರಗತಿ | 4ನೇ ತರಗತಿ | 5ನೇ ತರಗತಿ | |
|---|---|---|---|---|---|
| 5 | 04 | 06 | 05 | 06 | ಒಟ್ಟು 26 ಮಕ್ಕಳು |

ವ್ಯಾಸಂಗ ಮಾಡುತ್ತಿದ್ದು ಇಡೀ ವರ್ಷ ಶೆ. 100% ಹಾಜರಾತಿ ಇರುತ್ತದೆ . ಈ ಮಕ್ಕಳಿಗೆ ಈವರ್ಷ ಇನ್ನರ್ ವೀಲ್ ಸಂಸ್ಥೆಯವರು ಉಚಿತ ಸಮವಸ್ತ್ರವನ್ನು ದೇಣಿಗೆ ರೂಪದಲ್ಲಿ ನೀಡಿರುತ್ತಾರೆ

ಎಫ್.ಎಲ್.ಎನ್. ಸಾಧನೆ :

ಈ ಶಾಲೆಯು ಬುನಾದಿ ಅಕ್ಷರ ಹಾಗೂ ಸಂಖ್ಯಾಜ್ಞಾನದಲ್ಲಿ ಹೆಚ್ಚಿನ ಸಾಧನೆಯನ್ನು ಗಳಿಸಿದೆ ಈ ಎಫ್.ಎಲ್.ಎನ್. ಸಾಧನೆಯನ್ನು ಡಯಟ್ ಚಿತ್ರದುರ್ಗ ಇವರು ಸತತವಾಗಿ ಎರಡು ಬಾರಿ ಡಯಟ್ ನ ಪ್ರಾಂಶುಪಾಲರಾದ ಶ್ರೀ ನಾಸಿರುದ್ದೀನ್ ಸರ್ ರವರ ನೇತೃತ್ವದಲ್ಲಿ ಉಪನ್ಯಾಸಕರಾದ ಶ್ರೀ ಶಿದ್ದೇಶಿ ಸರ್, ಶ್ರೀ ಪ್ರಸಾಧ್ ಸರ್, ಶ್ರೀ ಬಸವರಾಜ್ ಸರ್, ಶ್ರೀ ಲೋಕೇಶ್ ಸರ್ ರವರು ಬೇಟಿ ನೀಡಿ ಶಾಲಾ ಶೈಕ್ಷಣಿಕ ಪ್ರಗತಿ ಯನ್ನು ಪರೀಸೀಲಿಸಿ ಪ್ರತಿಯೊಬ್ಬ ವಿಧ್ಯಾರ್ಥಿಯ ಬುನಾಧಿ ಸಾಕ್ಷರತೆ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಪರಿಸೀಲಿಸಿ ಈ ಶಾಲೆಯ ಎಫ್.ಎಲ್.ಎನ್. ಪ್ರಗತಿಯಲ್ಲಿ **100%** ಸಾದಿಸಿದೆಯೆಂಬುದನ್ನು ವೀಡಿಯೊ ಮೂಲಕ ಚಿತ್ರೀಕರಿಸಿ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಪ್ರಶಂಸಿದ್ದಾರೆ ಈ ಶಾಲೆಯ ಗ್ರಂಥಾಲಯದಲ್ಲಿ **140** ಪುಸ್ತಕಗಳಿದ್ದು ಮಕ್ಕಳ ಪೂರಕ ಓದುವಿಕೆಗೆ ಸಹಕಾರಿಯಾಗಿದೆ

## ಕ್ರಿಯಾಶೀಲ ಶಿಕ್ಷಕರು:

ಈ ಶಾಲೆಗೆ 2006 ರಲ್ಲಿ ಹೊಸದಾಗಿ ಬಂದ ಶಿಕ್ಷಕರಾದ ಶ್ರೀ ನಾಗೇಂದ್ರಪ್ಪ ಸಿ.ಎಸ್. ಇವರು ಬಂದ ಸಮಯದಲ್ಲಿ ಕುಗ್ರಾಮದಲ್ಲಿ ಯಿದ್ದ ಈ ಶಾಲೆಯ ಮಕ್ಕಳಿಗೆ ಶಾಲೆಯ ಕಲ್ಪನೇಯೇ ಇರಲಿಲ್ಲ ಇಂತಹ ಸಮಯದಲ್ಲಿ ಈ ಶಿಕ್ಷಕರು ಬದ್ದತೆಯಿಂದ ಕೆಲಸ ಪಾರ್ರಂಭಿಸಿ ಮಕ್ಕಳು ಶಾಲೆಗೆ ಬರುವಂತಹ ವಾತಾವಣರವನ್ನು ನಿರ್ಮಿಸಲು ಸತತವಾಗಿ ಒಂದು ವರ್ಷ ಪ್ರಯತ್ನಿಸಿ ಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಮತ್ತು ಎಸ್.ಡಿ.ಎಮ್.ಸಿ. ಸಮಿತಿಯ ಸಧ್ಯಸರುಗಳಲ್ಲಿ ಶಾಲೆಯ ಬಗ್ಗೆ ಅಭಿಮಾನ ಮೂಡಿಸಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರಿ ಯಾಗಿದ್ದಾರೆ ಈ ಶಿಕ್ಷಕರು ಶಾಲೆಯ ಮಕ್ಕಳಲ್ಲಿ ಶಿಸ್ತು ಸಮಯ ಪಾಲನೆ ಸ್ವಚ್ಚತಾ ಮನೋಭಾವನೆಗೆ ಆಧ್ಯತೆ ನೀಡಿ ಶೈಕ್ಷಣಿಕ ಪ್ರಗತಿಗೆ ಸಹಕರಿಸಿದ್ದಾರೆ **2023-2024** ನೇ ಸಾಲಿನಲ್ಲಿ ಎಫ್.ಎಲ್.ಎನ್ ಸಾದನೆಯಲ್ಲಿ ಶೆ. **100** ರಷ್ಟು ಸಾಧನೆ ಮಾಡಿ ಶಾಲೆಯ ಮತ್ತು ಊರಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಈ ಶಿಕ್ಷಕರು ಶಾಲಾ ಆವರಣವನ್ನು ಸ್ವಚ್ಚವಾಗಿಟ್ಟು ಕೊಳ್ಳುವುದರ ಜೊತೆಗೆ ಆವರಣದಲ್ಲಿ ಗಿಡ ಮರಗಳನ್ನು ಬೆಳೆಸಿದ್ದು ಶಾಲಾ ಆವರಣ ನೋಡುಗರನ್ನು ಆಕರ್ಷಿಸುತ್ತದೆ ಕ್ರಿಯಾಶೀಲರಾದ ಈ ಶಿಕ್ಷಕರು ಶಿಸ್ತು,ಸಮಯಪಾಲನೆ, ಕರ್ತವ್ಯನಿಷ್ಠೆ ಮಕ್ಕಳಬಗ್ಗೆ ಕಾಳಜಿಯನ್ನು ಹೊಂದಿದವರಾಗಿದ್ದಾರೆ

ಇನ್ನೊರ್ವ ಕ್ರಿಯಾಶೀಲ ಶಿಕ್ಷಕರಾದ ಶ್ರೀ ಶಿವಕುಮಾರ್ ಹೆಚ್.ಆರ್. ಇವರು ಪ್ರಸ್ತುತ ವರ್ಷ ಜೂನ್ **2023** ರಲ್ಲಿ ಶಾಲೆಗೆ ವರ್ಗಾವಣೆಯಾಗಿ ಬಂದಿದ್ದು ಇವರು ಸಹ ಶಿಸ್ತು ಸಮಯ ಪಾಲನೆ ಮತ್ತು ಕಲಿಕೆಗೆ ಹೆಚ್ಚಿನ ಪ್ರಾಧ್ಯಾನತೆ ನೀಡಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿದ್ದಾರೆ.

ಈ ಶಾಲೆಯ ಮಕ್ಕಳಿಗೆ ಪಾಠೋಪಕರಣಗಳು ಮತ್ತು ಪೀಠೋಪಕರಣಗಳ ಅವಶ್ಯಕತೆಯಿದೆ .






ಮತ್ತು ಸಾಕ್ಷರತಾ ಇಲಾಖೆ, ಹಿರಿಯೂರು.
ಕಿರಿಯ ಪ್ರಾಥಮಿಕ ಪಾಠ ಶಾಲೆ, ಕೆರೆಕೋಡಿಹಟ್ಟಿ.



